DCX SYSTEMS LIMITED
CIN: L31908KA2011PLC061686

An AS 9100D Certified

Regd. Off. Add.: Aerospace SEZ Sector, Plot Nos. 29,30 and 107,Hitech Defence and Aerospace Park, Kavadadasanahalli, Bengaluru Rural – 562110, Karnataka, India.

Email:cs@dcxindia.com
Tel: 080-67119555
Web:www.dcxindia.com

August 08, 2025

BSE Limited
P J Towers
Dalal Street, Fort
Mumbai – 400001

National Stock Exchange of India Ltd
Exchange Plaza, C-1, Block G
Bandra Kurla Complex, Bandra (E)
Mumbai – 400051

Scrip Code – 543650

Symbol – DCXINDIA

Dear Sir/Madam,

Sub: Advertisement in Newspapers

Pursuant to the Regulations 30 and 47 of the SEBI (Listing Obligations and Disclosure Requirements) Regulations, 2015, please find enclosed herewith the newspaper advertisement clippings of the publication of Un-Audited Financial Results (Standalone & Consolidated) of the Company for the quarter ended June 30, 2025, duly published in Financial Express (All India Edition) and in regional newspaper, Samyuktha Karnataka (Bengaluru Edition) on August 08, 2025.

The copies of newspaper advertisement will also be hosted on the Company's website at www.dcxindia.com.

Please take the same on your records.

Thanking you,

Yours faithfully,
For **DCX Systems Limited**

Gurumurthy Hegde
Digitally signed by Gurumurthy Hegde
Date: 2025.08.08 13:30:04 +05'30'

Gurumurthy Hegde
Company Secretary, Legal and Compliance Officer

ಚುಟುಕು ಸುದ್ದಿ

ಕಾವ್ಯದ ಆಳಕ್ಕೆ ಇಳಿದಿದ್ದ ಸಾಹಿತ್ಯ ಜಂಗಮ ಕಿರಂ: ಪುರುಷೋತ್ತಮ್ ಬಿಳಿಮಲೆ

ಬೆಂಗಳೂರು: ಕನ್ನಡ ಕಾವ್ಯ ಪರಂಪರೆಗೆ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡಿದ್ದ ಕಾವ್ಯ ಮೀಮಾಂಸೆಯ ಪರಿಭಾಷೆಯಲ್ಲಿ ಬಹುಜ್ಞತೆ ಸಾಧಿಸಿದ್ದ ಕಿರಂ ನಾಗರಾಜು ಅವರು ಕಾವ್ಯದ ಆಳಕ್ಕೆ ಇಳಿದಿದ್ದ ಸಾಹಿತ್ಯ ಜಂಗಮ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

ರವೀಂದ್ರ ಕಲಾಕ್ಷೇತ್ರದಲ್ಲಿ ಜನಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು ಆರ್ಟ್ ಫೌಂಡೇಷನ್ ಹಾಗೂ ಕಿರಂ ಪ್ರಕಾಶನದ ಸಹಯೋಗದಲ್ಲಿ ಆಯೋಜಿಸಿದ್ದ ಕಾಡುವ ಕಿರಂ–ಅಹೋರಾತ್ರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕುಮಾರವ್ಯಾಸ ಸೇರಿದಂತೆ ಎಲ್ಲ ಕಾಲಘಟ್ಟದ ಕವಿ, ಕಾವ್ಯಗಳನ್ನು ಅಧ್ಯಯನ ಮಾಡಿದ ಅವುಗಳ ಕಾವ್ಯಾಂಶದ ಕುರಿತು ದಿನಗಟ್ಟಲೆ ಮಾತನಾಡಬಲ್ಲ ಸಾಮರ್ಥ್ಯ ಹೊಂದಿದ್ದ ಕಿರಂ ಅವರು, ಅಕ್ಷರ ತಂದುಕೊಡುವ ಅಹಂಕಾರವನ್ನು ಮುರಿಯುವಂತ ಕಾರ್ಯ ಮಾಡಿದ್ದಾರೆ. ಬರವಣಿಗೆಗಿಂತ ಮಾತಿನಲ್ಲಿಯೇ ಮಾಂತ್ರಿಕತೆ ಸೃಷ್ಟಿಸುತ್ತಿದ್ದ ಕಿ.ರಂ ಅವರು ಕಾವ್ಯ ಜಗತ್ತಿನ ಮಾಂತ್ರಿಕ ಶಕ್ತಿಯಾಗಿದ್ದರು ಎಂದರು.

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಡಾ.ಚಂದ್ರಶೇಖರ ಕಂಬಾರ ಅವರು ಕುಲಪತಿಗಳಾಗಿದ್ದ ಅವಧಿಯಲ್ಲಿ ಕಿರಂ ಅವರಿಂದ ಕಾವ್ಯದ ಕುರಿತು ಬರೆಸಬೇಕೆಂಬ ಪ್ರಯತ್ನ ವಿಫಲವಾಗಿತ್ತು. ಆದರೆ, ಕಿರಂ ಅವರು ಹಲವು ಉಪನ್ಯಾಸಗಳು, ಸೆಮಿನಾರ್‌ಗಳು, ಕಾವ್ಯದ ಕುರಿತು ಚರ್ಚೆ ಮಾಡಿದ್ದರು. ಒಂದು ಪುಸ್ತಕ ಬರೆಯುವುದಕ್ಕಿಂತ ನೂರುಪಟ್ಟು ಕೆಲಸವನ್ನು ಕನ್ನಡ ವಿವಿಯಲ್ಲಿ ಕಿರಂ ಮಾಡಿದ್ದಾರೆ. ಅದನ್ನು ಗ್ರಹಿಸುವ ಶಕ್ತಿ ನಮಗೆ ಇರಲಿಲ್ಲ. ಬರೀ ಒಂದು ಪುಸ್ತಕದಿಂದ ಮಾತ್ರ ಗ್ರಹಿಸುವ ಒಂದು ಶುಷ್ಕ ವ್ಯವಸ್ಥೆಗೆ ಕಿರಂ ಹೊಂದಿಕೊಳ್ಳುವ ಮನುಷ್ಯನೇ ಆಗಿರಲಿಲ್ಲ. ಅವರು ಹೊಂದಿಕೊಳ್ಳಬೇಕು ಎಂದು ಭಾವಿಸಿದರೆ ಅದು ನಮ್ಮ ತಪ್ಪೇ ಹೊರತು ಕಿರಂ ತಪ್ಪಲ್ಲ ಎಂದು ಹೇಳಿದರು.

ಉಡುಪುಗಳ ವಿನ್ಯಾಸದ ಕಾರ್ಯಾಗಾರಕ್ಕೆ ಚಾಲನೆ

ಯಲಹಂಕ: ಫ್ಯಾಶನ್ ಜಗತ್ತು ದಿನೇ ದಿನೇ ವಿಸ್ತಾರಗೊಳ್ಳುತ್ತಿದ್ದು, ಉಡುಪುಗಳ ಯುವ ವಿನ್ಯಾಸಕಾರರು ಸಿಗುವ ಹೊಸ ಹೊಸ ಅವಕಾಶಗಳನ್ನು ಬಳಸಿಕೊಳ್ಳಲು ಮುಂದಾಗಬೇಕು ಎಂದು ಚಿತ್ರಕಲಾವಿದ ಬೆಳ್ಳಿ ಮೇಘನಾಥ ಅಬ್ರಹಾಮ್ ತಿಳಿಸಿದರು.

ಯಲಹಂಕ ಉಪನಗರದ ಸಿ.ಇ.ಎಸ್ ಫ್ಯಾಶನ್ ತಾಂತ್ರಿಕ ವಿದ್ಯಾಲಯದಲ್ಲಿ ಉಡುಪುಗಳ ವಿನ್ಯಾಸದ ರೇಖಾಚಿತ್ರಗಳ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಆಧುನಿಕ ಕಾಲಘಟ್ಟದಲ್ಲಿ ವಿವಿಧ ರೀತಿಯ ಉಡುಪುಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ವಿನ್ಯಾಸಕಾರರಿಗೂ ಸಾಕಷ್ಟು ಬೇಡಿಕೆ ಹೆಚ್ಚುತ್ತಿದ್ದು, ಉಡುಪು ವಿನ್ಯಾಸಗಳ ಬಗ್ಗೆ ತಿಳಿದುಕೊಳ್ಳಲೇಬೇಕಿದೆ ಎಂದರು.

ಬೆಳ್ಳಿ ಮೇಘನಾಥ ಅಬ್ರಹಾಮ್ ಅವರು ವಿವಿಧ ಪ್ರಕಾರದ ದೈಹಿಕ ಅಂಗಾಂಗಳ ರೇಖಾಚಿತ್ರಗಳ ನೀಲಿ ನಕ್ಷೆಯನ್ನು ತಯಾರಿಸುವ ಪ್ರಾತ್ಯಾಕ್ಷಿಕೆಯನ್ನು ನೆರವೇರಿಸಿದರು.

ದೂರದರ್ಶನ ಕೇಂದ್ರದ ಮಾಜಿ ನಿರ್ದೇಶಕ ಜಿ.ಎಂ.ಶಿರಹಟ್ಟಿ, ಫ್ಯಾಶನ್ ವಿದ್ಯಾಲಯದ ಪ್ರಾಂಶುಪಾಲ ಡಾ.ದೇವೇಂದ್ರನ್, ಪ್ರಾಧ್ಯಾಪಕ ಜ್ಞಾನೇಶ್ವರ, ಟೆನ್‌ಜಿನ್ ಸಿಂಧುಜಾ, ವ್ಯವಸ್ಥಾಪಕಿ ಶಬಾನಾಜ ರಫಿಕ, ಸಹಾಯಕಿ ಭವ್ಯಾ ಲಕ್ಷ್ಮೀತಿ ಉಪಸ್ಥಿತರಿದ್ದರು. ಸಂವಾದದಲ್ಲಿ ವಿದ್ಯಾರ್ಥಿನಿಯರಾದ ಯಾಸ್ಮೀನ್, ಅಂಜಲಿ, ಮೇಘನಾ, ಅನುಶ್ರೀ, ಅಂಕಿತಾ ಮತ್ತಿತರರು ಭಾಗವಹಿಸಿದ್ದರು.

ಚೆನ್ನಮ್ಮ, ರಾಯಣ್ಣ ಜೀವನ ಸಾಧನೆ ಅನಾವರಣ | 150ಕ್ಕೂ ಹೆಚ್ಚು ಬಗೆಯ ಹೂಗಳ ಬಳಕೆ

ಹೂವಿನಲ್ಲಿ ಅರಳಿದ ಕಿತ್ತೂರು ಕೋಟೆ

ಸಂ.ಕ. ಸಮಾಚಾರ, ಬೆಂಗಳೂರು

ಒಂದೆಡೆ ಧೈರ್ಯ ತ್ಯಾಗ ಪ್ರದರ್ಶಿಸಿದ ಕಿತ್ತೂರು ಚೆನ್ನಮ್ಮನ ಪ್ರತಿಮೆ ರಾರಾಜಿಸುತ್ತಿದ್ದು ಇನ್ನೊಂದೆಡೆ ವಿವಿಧ ಬಣ್ಣಗಳಲ್ಲಿ ಅರಳಿದ ಕಿತ್ತೂರು ಕೋಟೆಯು ನೋಡುಗರನ್ನು ಸೆಳೆಯುತ್ತಿತ್ತು.

ಸ್ವಾತಂತ್ರ್ಯೋತ್ಸವದ ಪ್ರಯುಕ್ತ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ 218ನೇ ಫಲಪುಷ್ಪ ಪ್ರದರ್ಶನದಲ್ಲಿ ಕಂಡುಬಂದ ದೃಶ್ಯಗಳಿವು. ವೀರರಾಣಿ ಕಿತ್ತೂರು ಚೆನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜೀವನ ಸಾಧನೆ, ಹೋರಾಟದ ಹಾದಿಯನ್ನು ಪುಷ್ಪಗಳಲ್ಲಿ ಅನಾವರಣಗೊಳಿಸಲಾಗಿದ್ದು, ಕಿತ್ತೂರಿನ ಕೋಟೆಯನ್ನು ಹಸಿರು, ಬಿಳಿ, ಕಂದು ಹಾಗೂ ಗುಲಾಬಿ ವರ್ಣದ 1.5 ಲಕ್ಷ ಡಚ್ ಗುಲಾಬಿ ಹೂವು, 1.5ಲಕ್ಷ ಹೈಬ್ರೀಡ್ ಸೇವಂತಿಗೆ ಹಾಗೂ 30 ಸಾವಿರ ಕೊಲ್ಕತ್ತಾ ಸೇವಂತಿಗೆ ಹೂವು ಬಳಸಿ ನಿರ್ಮಿಸಲಾಗಿದೆ.

ಲಾಲ್‌ಬಾಗ್‌ನಲ್ಲಿ ಸ್ವಾತಂತ್ರ್ಯೋತ್ಸವ ಅಂಗವಾಗಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದಲ್ಲಿ ಹೂವಿನಲ್ಲಿ ಅರಳಿರುವ ಕಿತ್ತೂರು ಕೋಟೆ ಜನರನ್ನು ಸೆಳೆಯುತ್ತಿದೆ.

ಅಲ್ಲದೇ ರಾಣಿ ಚೆನ್ನಮ್ಮ ಅವರು ಕುದುರೆಯ ಮೇಲೆ ಖಡ್ಗ ಹಿಡಿದುಕೊಂಡು ಕುಂತಿರುವ ಬೃಹತ್ ಪ್ರತಿಮೆ, ಅಶ್ವಾರೂಢ ಸಂಗೊಳ್ಳಿ ರಾಯಣ್ಣ ಪ್ರತಿಮೆ, ರಾಯಣ್ಣ ಹುತಾತ್ಮರಾದ ಸನ್ನಿವೇಶ ಮತ್ತು ರಾಣಿ ಚೆನ್ನಮ್ಮನವರ ಐಕ್ಯಸ್ಮಾರಕ, ರಾಣಿ ಅಬ್ಬಕ್ಕ ದೇವಿ, ಚೈನಾ ಭೈರಾದೇವಿ, ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ ವೀರಮ್ಮಾಜಿ, ಒನಕೆ ಓಬವ್ವ ಸೇರಿದಂತೆ ಇನ್ನಿತರೆ ಐತಿಹಾಸಿಕ ಸ್ಥಳಗಳ ಬಗ್ಗೆ ಶಿಕ್ಷಕರು ಮಕ್ಕಳಿಗೆ ಮಾಹಿತಿ ನೀಡಿದರು. ಫಲಪುಷ್ಪ ಪ್ರದರ್ಶನವನ್ನು ಕಂಡು ಮಕ್ಕಳು, ಹಿರಿಯರು, ಯುವಕರು, ಯುವತಿಯರು ಸೆಲ್ಫಿಗೆ ಮುಂದಾಗಿದ್ದರು.

218ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಫಲಪುಷ್ಪ ಪ್ರದರ್ಶನಕ್ಕೆ ಸಿಎಂ ಚಾಲನೆ

ಬೆಂಗಳೂರು: ತೋಟಗಾರಿಕೆ ಇಲಾಖೆಯ ವತಿಯಿಂದ ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ 218ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಬ್ರಿಟಿಷರ ಕಾಲದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರನ್ನು ನೆನೆಸಿಕೊಂಡು ಸ್ಮರಣೆ ಮಾಡಬೇಕಾದ ಅಗತ್ಯವಿದ್ದು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ದಿಟ್ಟ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರಿಗೆ ಗೌರವ ಸಲ್ಲಿಸುವ ಕೆಲಸ ತೋಟಗಾರಿಕೆ ಇಲಾಖೆ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಕಿತ್ತೂರು ಚೆನ್ನಮ್ಮ ಬ್ರಿಟಿಷರ ವಿರುದ್ಧ ನಡೆದಂತಹ ಮೊದಲ ಯುದ್ಧದಲ್ಲಿ ಗೆದ್ದರೂ, ಎರಡನೇ ಬಾರಿ ಸೋತ್ತಿದ್ದರು. ಕಿತ್ತೂರು ಸೈನ್ಯದಲ್ಲಿ ವಿರಾವೇಶದಿಂದ ಹೋರಾಟ ಮಾಡುತ್ತಿದ್ದ ಚೆನ್ನಮ್ಮನ ಬಲಗೈ ಭಂಟನಂತಿದ್ದ ಸಂಗೊಳ್ಳಿ ರಾಯಣ್ಣ ಅವರನ್ನು ಬ್ರಿಟಿಷರು ಗಲ್ಲಿಗೇರಿಸಿದ್ದರು. ರಾಯಣ್ಣ ಆ.15ರಂದು ಜನಿಸಿದ್ದರೆ, ಜ.26ರಂದು ಸಾವನ್ನಪ್ಪಿದ್ದರು. ಇದೀಗ ಈ ಎರಡೂ ದಿನಗಳು ನಮಗೆ ವಿಶೇಷವಾಗಿವೆ ಎಂದರು. ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ, ರಾಮಲಿಂಗಾರೆಡ್ಡಿ, ಡಾ.ಎಂ.ಸಿ ಸುಧಾಕರ್, ಹರಿಹರ ವೀರಶೈವ ಲಿಂಗಾಯತ್ ಪಂಚಮಸಾಲಿ ಗುರುಪೀಠದ ವಚನಾನಂದಸ್ವಾಮೀಜಿ, ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಮತ್ತಿತರರಿದ್ದರು.

ವರಮಹಾಲಕ್ಷ್ಮಿ ಸಡಗರ ಖರೀದಿ ಭರಾಟೆ ಜೋರು

ಸಂ.ಕ.ಸಮಾಚಾರ,ರಾಮನಗರ

ಜಿಲ್ಲೆಯಲ್ಲಿ ಎಲ್ಲೆಡೆ ವರಮಹಾಲಕ್ಷ್ಮಿ ಹಬ್ಬದ ಸಂಭ್ರಮ ಮನೆ ಮಾಡಿದ್ದು, ಬೆಲೆ ಏರಿಕೆಯ ನಡುವೆಯೂ ಹಬ್ಬದ ಖರೀದಿ ಭರಾಟೆ ಜೋರಾಗಿದೆ.

ಲಕ್ಷ್ಮಿಯನ್ನು ಪ್ರತಿಷ್ಠಾಪಿಸಲು ಸುಮಂಗಲಿಯರು–ಯುವತಿಯರು ಸಂಭ್ರಮ–ಸಡಗರದ ಸಿದ್ಧತೆ ನಡೆಸಿದ್ದಾರೆ. ಹಬ್ಬದ ಪ್ರಯುಕ್ತ ಹೂವು–ಹಣ್ಣಿನ ಬೆಲೆ ಕೊಂಚ ದುಬಾರಿಯಾಗಿದೆ.

ವರಮಹಾಲಕ್ಷ್ಮಿ ಹಬ್ಬದ ಹಿನ್ನೆಲೆಯಲ್ಲಿ ನಗರದ ಎಂ.ಜಿ.ರಸ್ತೆ, ಹಳೇ ಬಸ್ ನಿಲ್ದಾಣ ವೃತ್ತ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಹೂವು–ಹಣ್ಣು, ಬಾಳೆಕಂದು, ತಾವರೆ ಹೂವಿನ ವ್ಯಾಪಾರದ ಭರಾಟೆ ಜೋರಾಗಿತ್ತು. ಬಹುತೇಕರು ಬುಧವಾರವೇ ಹಬ್ಬದ ವಸ್ತುಗಳ ಖರೀದಿ ಮಾಡಿಕೊಂಡಿದ್ದರೆ. ಇನ್ನೂ ಹಲವರು ಗುರುವಾರ ಬೆಳಗ್ಗೆಯಿಂದಲೇ ಹಬ್ಬಕ್ಕೆ ಬೇಕಾದ ವಸ್ತುಗಳ ಖರೀದಿಯಲ್ಲಿ ತೊಡಗಿದ್ದರು. ಇದರಿಂದ ಪ್ರಮುಖ ರಸ್ತೆಗಳೆಲ್ಲಾ ಜನಜಂಗುಳಿಯಿಂದ ತುಂಬಿಹೋಗಿತ್ತು.

ಹೂವು-ಹಣ್ಣು ಬೆಲೆ ದುಪ್ಪಟ್ಟು :

ಮಿಕ್ಸ್ ಹಣ್ಣು ಪ್ರತಿ ಕೆಜಿಗೆ 200 ರೂ., ಸೇಬು 200ರಿಂದ 260 ರೂ., ಮೂಸಂಬಿ – 100ರಿಂದ 140ರೂ., ಕಿತ್ತಳೆ 160ರಿಂದ 200 ರೂ., ದಾಳಿಂಬೆ 200– 250 ರೂ., ಮರಸೇಬು 100 ರೂ., ಏಲಕ್ಕಿ ಬಾಳೆ ಹಣ್ಣು– 140 ರೂ., ಪಚ್ಚಬಾಳೆ 100 ರೂ., ದ್ರಾಕ್ಷಿ– 150 ರೂ., ಮಾವಿನ ಹಣ್ಣು 150 ರೂ., ಅನಾನಸ್ ಒಂದಕ್ಕೆ 50 ರೂ., ಬಿಡಿ ಹೂ 100 ಗ್ರಾಂಗೆ 80 ರೂ.ಗಳಿಗೆ ಮಾರಾಟವಾಗುತ್ತಿತ್ತು.

ಆದಿಚುಳಕನಗಿರಿ ಕ್ಷೇತ್ರದಲ್ಲಿ ಧಾರ್ಮಿಕ ಕಾರ್ಯಕ್ಕೆ ಚಾಲನೆ

ನಿರ್ಮಲಾನಂದನಾಥ ಶ್ರೀಗಳಿಂದ ಆರಂಭ

ಸಂ.ಕ.ಸಮಾಚಾರ,ಕನಕಪುರ:

ಸಿಲಿಕಾನ್ ಸಿಟಿ ಬೆಂಗಳೂರಿಗೆ ಸಮೀಪದಲ್ಲಿರುವ ಹಾರೋಹಳ್ಳಿ ತಾಲೂಕು ಆದಿಚುಳಕನಗಿರಿ ಕಾಲಭೈರವೇಶ್ವರ ಕ್ಷೇತ್ರ ಇದೀಗ ಇನ್ನೊಂದು ಆದಿಚುಂಚನಗಿರಿ ಕ್ಷೇತ್ರವಾಗಿದ್ದು ಕಾಯಕಕ್ಕೆ ಭಕ್ತಾದಿಗಳು ಮುಂದಾಗಿದ್ದಾರೆ.

ನಿಸರ್ಗ ಸಂಪತ್ತಿನ ನಡುವೆ ತಲೆಎತ್ತಿರುವ ಚುಳಕನಬೆಟ್ಟದಲ್ಲಿ ಶ್ರಾವಣ ಮಾಸದ ಶನಿವಾರದಲ್ಲಿನ ಮಹತ್ತರ ಧಾರ್ಮಿಕ ಕಾರ್ಯಕ್ಕೆ ಚಾಲನೆ ದೊರೆಯಲಿದೆ, ಪೂರ್ಣಿಮೆ ದಿನವಾದ ಅಂದು ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ಡಾ. ನಿರ್ಮಲಾನಂದನಾಥಸ್ವಾಮೀಜಿ ಈ ಕಾಯಕಕ್ಕೆ ಚಾಲನೆ ನೀಡಲಿದ್ದಾರೆ, ಸಮಾಜದ ಏಳಿಗೆ ಧಾರ್ಮಿಕ ಪರಂಪರೆ, ಪರಿಸರ ರಕ್ಷಣೆ, ಆಧ್ಯಾತ್ಮಿಕ ಚಿಂತನೆಗಳು ಇನ್ನುಮುಂದೆ ಆದಿಚುಳಕನಗಿರಿ ಕ್ಷೇತ್ರದ ಬೆಟ್ಟದಲ್ಲಿ ನಡೆಯಲಿವೆ, ಶೈಕ್ಷಣಿಕವಾಗಿ ಬೆಟ್ಟವನ್ನು ಅಭಿವೃದ್ಧಿ ಪಡಿಸುವ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಆಶಯವನ್ನು ಇಂದಿನ ಪೀಠಾಧ್ಯಕ್ಷರು ಮಹತ್ವಾಕಾಂಕ್ಷೆಯಿಂದೆ ಚಾಲನೆಗೊಳಿಸಲಿದ್ದಾರೆ.

ಸುಮಾರು 300 ವರ್ಷಗಳ ಇತಿಹಾಸವಿರುವ ಸಿದ್ಧಿಪುರುಷರ ತಾಣ ಎಂದು

ಪ್ರತೀತಿ ಇರುವ ಚುಳಕನಬೆಟ್ಟ ಇದೀಗ ಹೊಸ ರೂಪದಲ್ಲಿ ಅವತರಿಸಲಿದೆ, ಈ ಬೆಟ್ಟದಲ್ಲಿ ಎರಡು ಪುರಾತನ ಗುಹೆಗಳಿದ್ದು, ಮೇಲಿನ ಗುಹೆಯಲ್ಲಿ ಸಿದ್ಧಿಪುರುಷರು ವಾಸವಾಗಿದ್ದರು ಎಂಬ ಪ್ರತೀತಿ ಇದೆ, ಸುಮಾರು 40 ವರ್ಷಗಳಿಂದ ಈಚೆಗೆ ನಾಗದೇವರು ಎಂಬ ಯೋಗಪುರುಷರು ಸಂಸಾರ ತ್ಯಜಿಸಿ ತಪಸ್ಸು ಮಾಡಿಕೊಂಡಿದ್ದ ಈ ಜಾಗಕ್ಕೆ ಸಮೀಪದ ಮಾರಸಂದ್ರ ಗ್ರಾಮದ ವೆಂಕಟಾಚಲಯ್ಯ ಎಂಬುವವರು ದೀಪಾರಾಧನೆ ಮಾಡಿಕೊಂಡು ಬಂದಿದ್ದಾರೆ.

ಕಳೆದ 93 ತಿಂಗಳಿಂದ ನಡೆದುಕೊಂಡು ಬರುತ್ತಿರುವ ಪ್ರತಿ ಹುಣ್ಣಿಮೆ 93ಕ್ಕೆ ಕಾಲಿಟ್ಟಿದೆ, ಈ ಪ್ರದಕ್ಷಿಣೆಯಿಂದೆ ಧಾರ್ಮಿಕ ಪರಿಸರ, ಆಧ್ಯಾತ್ಮಕ ಚಿಂತನೆಗಳ ವೇದಿಕೆಯಾಗಿ ರೂಪುಗೊಂಡಿದೆ.

ಸ್ವ ಸಹಾಯ ಗುಂಪಿಗೆ ಸಾಲದ ಚೆಕ್ ವಿತರಣೆ

1359 ಮಂದಿ ಸದಸ್ಯತ್ವ ಹೊಂದಿರುವ ಸಂಘ

ಸಂ.ಕ. ಸಮಾಚಾರ, ವಿಜಯಪುರ

ನಮ್ಮ ಸಂಘ 1359 ಮಂದಿ ರೈತರ ಸದಸ್ಯತ್ವವನ್ನು ಹೊಂದಿದ್ದು, ಇವರಲ್ಲಿ 380 ರೈತರಿಗೆ ಸುಮಾರು 2 ಕೋಟಿ ರೂ. ಕೆಸಿಸಿ ಬೆಳೆಸಾಲ ನೀಡಲಾಗಿದೆ, 42 ಸ್ವ ಸಹಾಯ ಗುಂಪುಗಳನ್ನು ಹೊಂದಿದ್ದು, ಈ ಗುಂಪುಗಳಿಗೆ ಸುಮಾರು 45 ಲಕ್ಷ ರೂ. ಸಾಲ ನೀಡಲಾಗಿದೆ ಎಂದು ಮಂಡಿಬೆಲೆ ವಿವಿದೋದ್ಧೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷ ಸಿ.ಎನ್. ಚನ್ನೇಗೌಡ ಹೇಳಿದರು.

ಚನ್ನಕೇಶವಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಂಡಿಬೆಲೆ ವಿವಿದೋದ್ಧೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದರು.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ನಿರ್ದೇಶಕ ಹಿತ್ತರಹಳ್ಳಿ ರಮೇಶ್, ಜಿಪಂ ಮಾಜಿ ಸದಸ್ಯ ಕೋರಮಂಗಲ ಎಂ.ವೀರಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಮಂಡಿಬೆಲೆ ವಿವಿದೋದ್ಧೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಉಪಾಧ್ಯಕ್ಷೆ ವಿ.ಗೀತಾಮೂರ್ತಿ, ಪಿ.ವೆಂಕಟೇಶ್, ಎಂ.ಬಸವರಾಜ್, ಎಸ್.ರಾಜಣ್ಣ, ಎಂ.ಗಂಗಾಧರ್, ಆರ್.ಕೇಶವ, ಸಿ.ದೇವರಾಜ್, ಎಸ್.ಕೆಂಪೇಗೌಡ, ಡಿ.ತಿಮ್ಮರಾಯಪ್ಪ, ಹೆಚ್.ಎಂ.ಶ್ರೀನಾಥ್, ಎನ್.ಮಂಜುನಾಥ್, ಎನ್. ಕೃಷ್ಣಮೂರ್ತಿ,ಎ.ಮಂಜಣ್ಣ ಸೇರಿದಂತೆ ಇತರರಿದ್ದರು.

ಆಗಸ್ಟ್ 10ರಿಂದ 3 ದಿನಗಳವರೆಗೆ ರಾಘವೇಂದ್ರಸ್ವಾಮಿ ಆರಾಧನೆ

ಸಂ.ಕ. ಸಮಾಚಾರ, ಚನ್ನಪಟ್ಟಣ

ಪಟ್ಟಣದ ಕೋಟೆ ರಾಘವೇಂದ್ರಸ್ವಾಮಿ ಮಠದಲ್ಲಿ ಆ.10ರಿಂದ 12ರವರೆಗೆ ರಾಘವೇಂದ್ರ ಸ್ವಾಮಿಯವರ 354ನೇ ಆರಾಧನಾ ಮಹೋತ್ಸವ ನಡೆಯಲಿದ್ದು, ಭಕ್ತರು ಕುಟುಂಬ ಸಮೇತರಾಗಿ ಆಗಮಿಸಿ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಬೃಂದಾವನ ಸಮಿತಿ ಅಧ್ಯಕ್ಷ ಡಿ.ವೆಂಕಟೇಶ್ ಮೂರ್ತಿ ಮನವಿ ಮಾಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆ. 10 ಭಾನುವಾರ ಅಷ್ಟೋತ್ತರ, ವಿಶೇಷ ಪಂಚಾಮೃತ ಅಭಿಷೇಕ, ಹೂವಿನ ಅಲಂಕಾರ, ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ, ಆ.11 ಸೋಮವಾರ ಮಧ್ಯರಾಧನಾ ಮಹೋತ್ಸವ, ಮಧ್ಯಾಹ್ನ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಹಾಗೂ ಸಂಜೆ ಭರತನಾಟ್ಯ, ಕೂಚುಪುಡಿ ನೃತ್ಯ ಪ್ರದರ್ಶನ ಏರ್ಪಡಿಸಲಾಗಿದೆ, ಆ.12 ಮಂಗಳವಾರ ಉತ್ತರಾಧನೆ ಮಹೋತ್ಸವ, ಭಜನಾ ಕಾರ್ಯಕ್ರಮ, ರಜತರಥ ಪ್ರಾಕಾರೋತ್ಸವ ಮತ್ತು ರಜತ ತೊಟ್ಟಿಲು ಸೇವೆ ನಡೆಯಲಿದೆ ಎಂದು ತಿಳಿಸಿದರು. ಅರ್ಚಕ ರಾಘವೇಂದ್ರಮಯ್ಯ ಮಾತನಾಡಿದರು. ಶ್ರೀ ರಾಘವೇಂದ್ರ ಗುರುಗಳ ಬೃಂದಾವನ ಸಮಿತಿಯಿಂದ 80 ಲಕ್ಷ ರೂ ಅಂದಾಜು ವೆಚ್ಚದಲ್ಲಿ ಶ್ರೀ ಮಧ್ವ ಸದನ ಕಟ್ಟಡ ನಿರ್ಮಿಸಲು ತೀರ್ಮಾನ ಮಾಡಲಾಗಿದೆ, ಸಹಕಾರ ನೀಡುವವರು ಸಮಿತಿಯನ್ನು ಸಂಪರ್ಕಿಸಲು ಸಮಿತಿಯವರು ಇದೇ ಸಂದರ್ಭದಲ್ಲಿ ಮನವಿ ಮಾಡಿದರು.

ರಾಮನಗರದಲ್ಲಿ ರಾಯಲ್ ಓಕ್ ಫರ್ನಿಚರ್ ನೂತನ ಮಳಿಗೆಯನ್ನು ಉದ್ಘಾಟಿಸಲಾಯಿತು. ಸಂಸ್ಥೆಯ ಅಧ್ಯಕ್ಷ ವಿಜಯ್ ಸುಬ್ರಮಣಿಯಂ, ಗಣೇಶ್ ಜೂವೆಲರ್ಸ್ ಮಾಲೀಕರಾದ ಲಕ್ಷ್ಮಣ ಇತರರಿದ್ದರು.

ನ್ಯಾಯವಾದಿಗೆ ಪ್ರಾಣಬೆದರಿಕೆ ಕಲಾಪ ಬಹಿಷ್ಕರಿಸಿ ಪ್ರತಿಭಟನೆ

ಸಂ.ಕ.ಸಮಾಚಾರ, ಹೊಸಕೋಟೆ

ಎದುರು ಕಕ್ಷಿದಾರ ನ್ಯಾಯವಾದಿಗೆ ಪ್ರಾಣಬೆದರಿಕೆ ಒಡ್ಡಿರುವುದನ್ನು ಖಂಡಿಸಿ, ನ್ಯಾಯಾಂಗ ಕಲಾಪ ಬಹಿಷ್ಕರಿಸಿ ವಕೀಲರ ಸಂಘದಿಂದ ಗುರುವಾರ ಪ್ರತಿಭಟನೆ ನಡೆಯಿತು. ನಗರದ ನ್ಯಾಯಾಂಗ ಸಂಕೀರ್ಣದ ಆವರಣದಲ್ಲಿ ನ್ಯಾಯಾಂಗ ಕಲಾಪ ಬಹಿಷ್ಕರಿಸಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಹೊಸಕೋಟೆ ವಕೀಲರ ಸಂಘದ ಅಧ್ಯಕ್ಷ ರಮೇಶ್, ಬುಧವಾರ ಕರ್ತವ್ಯ ನಿರತ ನ್ಯಾಯವಾದಿಯೊಬ್ಬರ ಮೇಲೆ ಡಿಸಿ ಕೋರ್ಟ್‌ನಲ್ಲೇ ಜಿಲ್ಲಾಧಿಕಾರಿಗಳ ಎದುರೇ ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ, ಪ್ರಾಣಬೆದರಿಕೆ ಹಾಕಿದ್ದು, ನ್ಯಾಯಾವಾದಿಗೇ ಹೀಗಾದರೆ ಇನ್ನು ಜನಸಾಮಾನ್ಯರ ಪಾಡೇನು ಎಂದು ಪ್ರಶ್ನಿಸಿದ್ದಾರೆ.

ಹೊಸಕೋಟೆ ತಾಲೂಕು ವಕೀಲರ ಸಂಘದ ಸದಸ್ಯರು ಆದ ಟಿ.ಕೆ. ಮುನಿರಾಜು ಅವರು ಕೇಸ್ ನಿಮಿತ್ತ ಡಿಸಿ ಕೋರ್ಟ್‌ಗೆ ತೆರಳಿದ್ದು, ಅಲ್ಲಿ ಕಲಾಪ ನಡೆಯುತ್ತಿರುವಾಗ ಜಿಲ್ಲಾಧಿಕಾರಿ ಎದುರೇ ಹೊಸಕೋಟೆಯ ಮಹೇಂದ್ರ ಎಂಬುವರು ಪ್ರಾಣಬೆದರಿಕೆ ಒಡ್ಡಿದ್ದರೂ ಜಿಲ್ಲಾಧಿಕಾರಿಗಳು ಯಾವುದೇ ಕ್ರಮ ವಹಿಸಿಲ್ಲ ಎಂದು ಆರೋಪಿಸಿ, ಆರೋಪಿ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಇಲ್ಲವೇ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ಸಂಧರ್ಭ ವಕೀಲರ ಸಂಘದ ಕಾರ್ಯದರ್ಶಿ ಕೃಷ್ಣಪ್ಪ, ಮಾಜಿ ಅಧ್ಯಕ್ಷರಾದ ಎಂ. ವೆಂಕಟಸ್ವಾಮಿ, ಅಖಿಲ ಭಾರತ ವಕೀಲರ ಸಂಘದ ರಾಜ್ಯಾಧ್ಯಕ್ಷ ಹರೀಂದ್ರ ಸೇರಿದಂತೆ ಹಲವರಿದ್ದರು.

ಫಿಲಿಪ್ಪೀನ್ಸ್ ನಿಯೋಗದಿಂದ ಆರೋಗ್ಯ ಸಚಿವರ ಭೇಟಿ

ಬೆಂಗಳೂರು: ರಾಜ್ಯದಲ್ಲಿ ಆರೋಗ್ಯ ಇಲಾಖೆ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಡಯಾಲಿಸಿಸ್ ವ್ಯವಸ್ಥೆ ಕುರಿಂತೆ ಅಧ್ಯಯನಕ್ಕೆ ಆಗಮಿಸಿದ್ದ ಫಿಲಿಪೀನ್ಸ್ ನಿಯೋಗದ ಸದಸ್ಯರನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಭೇಟಿ ಮಾಡಿ ಚರ್ಚೆ ನಡೆಸಿದರು.

ಜಾಗತಿಕ ಆರೋಗ್ಯ ಸಹಕಾರ ಹಾಗೂ ಅರಿವು ಹಂಚಿಕೊಳ್ಳುವಿಕೆಯನ್ನು ಉತ್ತೇಜಿಸುವ ಕುರಿತಂತೆ ಸಚಿವರೊಂದಿಗೆ ಮಾತುಕತೆ ನಡೆಸಿದ ನಿಯೋಗ, ಬೆಂಗಳೂರಿನ ಕೆ.ಸಿ ಜನರಲ್ ಆಸ್ಪತ್ರೆಗೆ ಭೇಟಿ ನೀಡಿ ಡಯಾಲಿಸಿಸ್ ಕೇಂದ್ರದಲ್ಲಿ ಒದಗಿಸುತ್ತಿರುವ ಆರೋಗ್ಯ ಸೇವೆ ಕುರಿತಂತೆ ಹೆಚ್ಚಿನ ಮಾಹಿತಿ ಪಡೆದರು. ಕಡಿಮೆ ಅವಧಿಯಲ್ಲಿ ರಾಜ್ಯಾದ್ಯಂತ 100 ಡಯಾಲಿಸಿಸ್ ಕೇಂದ್ರಗಳಲ್ಲಿ 800 ಕ್ಕೂ ಹೆಚ್ಚು ಏಕಬಳಕೆಯ ಡಯಾಲೈಸರ್ ಯಂತ್ರಗಳ ಅಳವಡಿಕೆ ಕುರಿತಂತೆ ಫಿಲಿಪೀನ್ಸ್ ನಿಯೋಗ ಸಚಿವರ ಕಾರ್ಯಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು.

21ಕ್ಕೆ ದಸಂಸ ಪ್ರತಿಭಟನೆ

ಬೆಂಗಳೂರು: ರಾಜ್ಯ ಸರಕಾರ ಪ.ಜಾತಿ ಮತ್ತು ಪ.ಪಂಗಡದ ಅಭಿವೃದ್ಧಿಗೆ ಬಳಸಬೇಕಾದ ಎಸ್ಸಿಪಿ–ಟಿಎಸ್ಪಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿರುವುದನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಆ.21ರಂದು ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಎಸ್ಸಿಪಿ–ಟಿಎಸ್ಪಿ ಕಾಯ್ದೆಯಡಿ 11 ವರ್ಷಗಳಲ್ಲಿ ಎಸ್‌ಸಿ–ಎಸ್‌ಟಿ ಸಮುದಾಯದವರ ಅಭಿವೃದ್ಧಿಗೆ 4 ಲಕ್ಷ ಕೋಟಿಗೂ ಹೆಚ್ಚು ಅನುದಾನವನ್ನು ನೀಡಲಾಗಿದೆ ಎಂದು ಅವರು ತಿಳಿಸಿದರು.

ಸರಕಾರ ಇಲ್ಲಿಯವರೆಗೂ ದಲಿತರ ಅಭಿವೃದ್ಧಿಗೆ ಕೇವಲ 15 ಸಾವಿರ ಕೋಟಿ ಹಣ ಮಾತ್ರ ವಿನಿಯೋಗಿಸಲಾಗಿದೆ ಎಂದು ದೂರಿದರು.

ಸರಕಾರದ 38 ಇಲಾಖೆಗಳ ಬ್ಯಾಕ್‌ಲಾಗ್ ಹುದ್ದೆಗಳ ಕುರಿತು ಇಲಾಖಾ ಮುಖ್ಯಸ್ಥರು ಸರಿಯಾದ ಮಾಹಿತಿ ಕೊಡದೆ ಪರಿಶಿಷ್ಟರ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದು ಖಂಡನೀಯವಾದುದು ಅಂತಹವರ ಮೇಲೆ ಎಸ್‌ಸಿ–ಎಸ್‌ಟಿ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು ಎಂದು ಅವರು ಹೇಳಿದರು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದ ಒಳಮೀಸಲಾತಿ ಸಮಿತಿ ಅಂತಿಮ ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದು, ಆ ವರದಿಯನ್ನು ಸರಕಾರ ಶೀಘ್ರವಾಗಿ ಜಾರಿ ಮಾಡಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕು ಎಂದು ಅವರು ಒತ್ತಾಯಿಸಿದರು.

ಕೆಂಪು ಮಣ್ಣು ಲೂಟಿ: ಮನವಿ

ಸಂ.ಕ.ಸಮಾಚಾರ, ಹೊಸಕೋಟೆ

ಅರಣ್ಯಪ್ರದೇಶದಲ್ಲಿ ಬೆಲೆಬಾಳುವ ಕೆಂಪು ಮಣ್ಣು ಲೂಟಿ ತಡೆ ಕೋರಿ ರೈತ ಸಂಘದಿಂದ ಮನವಿ.

ಸೂಲಿಬೆಲೆ ಹೋಬಳಿಯ ಇ ಮುತ್ಸಂದ್ರ ಅರಣ್ಯ ಪ್ರದೇಶದಲ್ಲಿ ಸರ್ವೆ ನಂ 79 ರಲ್ಲಿ ಬೆಲೆಬಾಳುವ ಫಲವತ್ತಾದ ಕೆಂಪು ಮಣ್ಣಿನ ನಿಕ್ಷೇಪವಿದ್ದು ಇದನ್ನು ಕೆಲವು ಪ್ರಭಾವಿಗಳು ಜೆಸಿಬಿ ಲಾರಿ ಬಳಸಿ ಅಕ್ರಮವಾಗಿ ಲೂಟಿ ಮಾಡುತಿದ್ದು ಈ ಬಗ್ಗೆ ಕೆಲವು ಪತ್ರಿಕೆ ಮತ್ತು ವಾಹಿನಿಗಳಲ್ಲಿ ವರದಿಯಾಗಿದ್ದು ಅರಣ್ಯ ಇಲಾಖೆ ಮತ್ತು ತಾಲೂಕು ಆಡಳಿತ ಇದನ್ನು ಪತ್ತೆ ಹಚ್ಚಿ ಇದಕ್ಕೆ ಕಡಿವಾಣ ಹಾಕಿ ಅರಣ್ಯ ಸಂಪತ್ತನ್ನು ರಕ್ಷಿಸಲು ಮನವಿ ಮಾಡಿದ್ದಾರೆ.